# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA








| | | | | | | | |
|---|---|---|---|---|---|---|---|
| ಸಂಪುಟ:01 | ಸಂಚಿಕೆ:229 | ನೋಂದಣಿ ನಂ.:KARKAN27911 | ವಿಜಯನಗರ | 05.02.2024 | ಸೋಮವಾರ | ಪುಟ:04 | ಬೆಲೆ:2 |
| Volume:01 | Issue:229 | Reg.No:KARKAN27911 | VIJAYANAGARA | 05.02.2024 | Monday | Page:04 | Rs:2 |


# ಕಣ್ಣೀರು ಹಿಂದೆ, ನಗು ಮುಂದಿರಬೇಕು

## ಕ್ರೇಜಿಸ್ಟಾರ್ ಕನಸುಗಾರ ರವಿಚಂದ್ರನ್ ಹೇಳಿಕೆ । ಹಂಪಿ ಎಂದ್ರೆ ರೋಮಾಂಚನ । ಹಂಪಿ ಉತ್ಸವ–2024 ಸಮಾರೋಪ



ಚಿತ್ರಗಳು: ಕೊಟ್ರೇಶ ಕೆ.ಎಂ.

**ಹಂಪಿ ಟೈಮ್ಸ್ ಹೊಸಪೇಟೆ**

ಎಲ್ಲರೂ ಒಗ್ಗಟ್ಟಾಗಿದ್ದೇವೆ ಎಂಬುದನ್ನು ಸಾಬೀತು ಪಡಿಸುವುದಕ್ಕಾಗಿಯೇ ಉತ್ಸವಗಳು ನಡೆಯಬೇಕು. ಹಂಪಿ ಎಂದರೇ ರೋಮಾಂಚನ, ಒಂದೊಂದು ಕಲ್ಲು ಒಂದೊಂದು ಕಥೆ ಹೇಳುತ್ತಾ ಸ್ವರಗಳನ್ನು ನುಡಿಯುತ್ತಿವೆ ಎಂದು ಕ್ರೇಜಿ ಸ್ಟಾರ್ ರವಿಚಂದ್ರನ್ ಹೇಳಿದರು.

ಹಂಪಿಯಲ್ಲಿ ಅರುಣ್‌ಸಾಗರ್ ನಿರ್ಮಿಸಿದ ಹಂಪಿ ಉತ್ಸವ – 2024ರ ಗಾಯತ್ರಿ ಪೀಠ ಮುಖ್ಯವೇದಿಕೆಯಲ್ಲಿ ಭಾನುವಾರ ಜರುಗಿದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ವಿಜಯನಗರ ಸಾಮ್ರಾಜ್ಯ ಜಗತ್ತಿನ ವಿವಿಧೆಡೆಯ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ ಅಂದಿನ ಕಲಾವಿದರ ಮಾಡಿದ ಸೇವೆಯೇ ಹೊರತು ನಮ್ಮದೇನು ಇಲ್ಲ. ನಾನು ಪ್ರೀತಿಗಾಗಿ ಹಂಬಲಿಸುತ್ತೇನೆ. ಪ್ರೀತಿಗಾಗಿ ಜೀವನವನ್ನೆ ಮುಡುಪಾಗಿಟ್ಟಿದ್ದೇನೆ. ಅಪ್ಪ, ಅಮ್ಮನನ್ನು ಕಳೆದುಕೊಂಡಿದ್ದೇನೆ. ಅಭಿಮಾನಿಗಳು ತೋರುವ ಪ್ರೀತಿಯಲ್ಲೆ ಅಪ್ಪ ಅಮ್ಮನನ್ನು ಕಾಣುತ್ತೇನೆ. ನಾವು ಮಾಡುವ ಒಂದೊಳ್ಳೆ ಕೆಲಸ ನಮ್ಮನ್ನು ಬಹುಕಾಲದವರೆಗೆ ಉಳಿಸುತ್ತದೆ ಎಂಬುದಕ್ಕೆ ಪ್ರೇಮಲೋಕ ಸಿನಿಮಾವೇ ಸಾಕ್ಷಿ. ಬದುಕಲು ದುಡ್ಡು ಬೇಕೆಂಬುದೇ ನನಗೆ ಗೊತ್ತಿರಲಿಲ್ಲ. ಅಭಿಮಾನಿಗಳ ಪ್ರೀತಿಯೇ ನನ್ನ ಗೆಲುವು ಸೋಲುಗಳಾಗಿವೆ. ನಾನು ಅಂದಕೊಂಡಾಗ ಸಿನಿಮಾ ಮಾಡಬೇಕೆನ್ನುವುದೇ ನನಗೆ ಗೆಲುವು. ಕೆಲ ಸಿನಿಮಾಗಳನ್ನು ನೋಡ್ತಾರೆ ಇನ್ನು ಕೆಲವನ್ನು ಹೆಚ್ಚಾಗಿ ನೋಡಲ್ಲ. ಬೇಸರ, ಖುಸಿಯೂ ಅಗುತ್ತಲಿರುತ್ತದೆ. ಪ್ರೇಮಲೋಕಕ್ಕೆ ನೂರವೈತ್ತು ಜನ ಸಂಗೀತ ನುಡಿಸಿದ್ದರು. ನನಗೆ ಗನ್ ಬೇಕಿಲ್ಲ. ಸಂಗೀತವೇ ನನ್ನ ಜೀವನ. ಅಯೋಧ್ಯೆ ತರ, ಮೈಸೂರು ಉತ್ಸವದಂತೆಯೂ



ಹಂಪಿ ಉತ್ಸವವಾಗಬೇಕು. ಮುಂಬರುವ ವರ್ಷ ಅಭಿಮಾನಿಗಳಿಗೆ ಮತ್ತೊಂದು ಪ್ರೇಮಲೋಕ ನೀಡುತ್ತೇನೆ. ನಿಮಗಿಷ್ಟವಾಗೋ ಸಿನಿಮಾ ಮಾಡ್ತಿನಿ, ಮನೆ ಮನೆಗಳಲ್ಲೂ ನೋಡಬೇಕಾದ ಸಿನಿಮಾ ಬರಲಿದೆ. ಸಿನಿಮಾ ಬಿಟ್ರೆ ಬೇರೆ ನನಗೇನೂ ಬರೊಲ್ಲ. ಸಿನಿಮಾ ಮಾಡ್ತಿನಿ. ನೀವು ನೋಡಿ ಪ್ರೋತ್ಸಾಹಿಸಬೇಕು. ಸಚಿವ ಜಮೀರ್ ಅಹ್ಮದ್ ಅವರು ಮಾತನಾಡುವ ಕನ್ನಡ ಮಾತನಾಡುವಾಗ ತೊದಲು ನುಡಿಯಬಹುದು. ಅದರೆ ಅಂದದ್ದನ್ನು ಮಾಡಿ ತೋರುವ ಛಲಗಾರ. ಉತ್ಸಾಹಿ ರಾಜಕಾರಣಿಯಾಗಿದ್ದಾರೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಬಿ.ಝಡ್, ಜಮೀರ್ ಅಹ್ಮದ್ ಖಾನ್ ಮಾತನಾಡಿ, ಈಬಾರಿಯ ಹಂಪಿ ಉತ್ಸವಕ್ಕೆ 10 ರಿಂದ 12 ಲಕ್ಷ ಜನರು ಆಗಮಿಸಿ ಉತ್ಸವಕ್ಕೆ ಮೆರುಗು ತಂದಿದ್ದಾರೆ. ಉತ್ಸವದ ಕೊನೆದಿನವೆಂದು ದುಃಖವಾಗುತ್ತಿದೆ. ಜಿಲ್ಲಾಡಳಿತ ಸೇರಿದಂತೆ ಎಲ್ಲಾ ಶಾಸಕರು, ಪೊಲೀಸ್ ಇಲಾಖೆ, ಮಾಧ್ಯಮಗಳ ಸಹಕಾರದಿಂದಾಗಿ ಜನಸಾಗರದಂತೆ ಪ್ರೇಕ್ಷಕರು ಸಾಂಸ್ಕೃತಿಕ ಕಲಾ ವೈಭವಗಳನ್ನು ವೀಕ್ಷಿಸಲು ಬಂದಿದ್ದಾರೆ. ಮುಂದಿನ ವರ್ಷ ಮತ್ತಷ್ಟು ಅದ್ದೂರಿಯಾಗಿ ಮಾಡಲಾಗುವುದು. ಹಂಪಿಯಲ್ಲಿ ಬಾಡಿಗೆ ಪಡೆದು ಆಹಾರ ಮಳಿಗೆ ಪಡೆದವರಿಗೆ ನಷ್ಟವಾಗಿದೆ ಎಂದು ಕೇಳಿಬಂದಿದೆ. ಮಳಿಗೆಗಳ ಬಾಡಿಗೆಯನ್ನು ಮನ್ನಾ ಮಾಡಲು ಸೂಚಿಸಿದ್ದೇನೆ. ಹಂಪಿ ಉತ್ಸವ ಅಂದ್ರೆ ಪಕ್ಷದ ಉತ್ಸವವಲ್ಲ, ನಾಡಹಬ್ಬ ಎನ್ನುವುದನ್ನು ಆನಂದಸಿಂಗ್ ವೇದಿಕೆಯಲ್ಲಿ ಕಾಣಿಸಿಕೊಳ್ಳುವ ಮೂಲಕ ಸಾಭೀತುಪಡಿಸಿದ್ದಾರೆ. ಕಳೆದಬಾರಿಗಿಂತ ಈಬಾರಿ ಹೆಚ್ಚಿನ ಸಂಖ್ಯೆಯ್ಲಲಿ ಜನ ಬಂದಿದ್ದಾರೆ. ನಟ ಪ್ರೇಮ್, ಮಾಜಿ ಸಚಿವ ಆನಂದಸಿಂಗ್, ಶಾಸಕರು, ಡಿಸಿ ಎಂ.ಎಸ್.ದಿವಾಕರ ಇತರರಿದ್ದರು.





## ವಚನ ಅರಿವು

### ನೀನರಿವಾದೆ

ಎಲ್ಲ ಎಲ್ಲವನರಿದು ಫಲವೇನಯ್ಯಾ,
ತನ್ನ ತಾನರಿಯಬೇಕಲ್ಲದೆ?
ತನ್ನಲ್ಲಿ ಅರಿವು ಸ್ವಯವಾಗಿರಲು
ಅನ್ಯರ ಕೇಳಲುಂಟೆ?
ಚೆನ್ನಮಲ್ಲಿಕಾರ್ಜುನಾ,
ನೀನರಿವಾಗಿ ಎನಗೆ ಮುಂದುದೋರಿದ ಕಾರಣ
ನಿಮ್ಮಿಂದ ನಿಮ್ಮನರಿದೆನಯ್ಯಾ ಪ್ರಭುವೆ.
– ಅಕ್ಕಮಹಾದೇವಿ

ಅರಿವಿನ ಪಥದಲ್ಲಿ ಸಾಗಬೇಕಾದ ವಿಧಾನವನ್ನು ಕುರಿತು ಮಾತಾಡುತ್ತದೆ ಈ ವಚನ. ಓದು, ಶಾಸ್ತ್ರಾಭ್ಯಾಸ, ವೇದಾಧ್ಯಯನ, ಜೀವನ ವಿಧಾನವನ್ನು ಕಲಿತು ಬದುಕಿದರೆ ಜೀವನ ಸಾರ್ಥಕವಾಗುವುದಿಲ್ಲ. ಮನುಷ್ಯ ಸತ್ಯದ ದಾರಿಯಲ್ಲಿ, ಪ್ರಾಮಾಣಿಕತೆಯ ಹೆಜ್ಜೆಗಳನ್ನಿಡುತ್ತ, ತನ್ನೊಳಗಿರುವ ಆತ್ಮಜ್ಞಾನದ ಅರಿವನ್ನು ತಿಳಿದುಕೊಂಡು ಬದುಕಬೇಕು. ತನ್ನ ಅರಿವು ತನ್ನಲ್ಲಿ ಇರುವಾಗ ಅದನ್ನು ಬೇರೆ ಯಾರನ್ನು ಕೇಳಿ ತಿಳಿದುಕೊಂಡು ಅವರಿಂದ ಅವರ ಅನುಭವವನ್ನು ಪಡೆದು ತನ್ನ ಅನುಭವ ಎಂಬಂತೆ ಬದುಕಬಾರದು. ಈ ಜಗತ್ತಿನ ಅರಿವು ತನ್ನೊಳಗೆ ಇದೆ. ಆ ಅರಿವೇ ದೈವವಾಗಿದೆ ಎನ್ನುತ್ತಾಳೆ ಅಕ್ಕಮಹಾದೇವಿ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಮಾಧ್ಯಮ ಕೇಂದ್ರಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಭೇಟಿ


**ಹಂಪಿ ಟೈಮ್ಸ್ ಹೊಸಪೇಟೆ:**
ವಸತಿ, ವಕ್ಫ ಹಾಗೂ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯ ಸಚಿವರು ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್ ಅಹಮದ್ ಖಾನ್ ಅವರು ಭಾನುವಾರ ಹಂಪಿ ಉತ್ಸವ–24ರ ಮಾಧ್ಯಮ ಕೇಂದ್ರಕ್ಕೆ ಭೇಟಿ ನೀಡಿದರು.

ಮಾಧ್ಯಮ ಕೇಂದ್ರದಲ್ಲಿ ಕಾರ್ಯನಿರತರಾಗಿದ್ದ ಪತ್ರಕರ್ತರನ್ನು ಮಾತನಾಡಿಸಿ ಅವರ ಕಾರ್ಯವೈಖರಿ, ಶ್ರಮದ ಬಗ್ಗೆ ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದರು. ಹಂಪಿ ಉತ್ಸವಕ್ಕೆ ಅತ್ಯುತ್ತಮವಾಗಿ ಪ್ರಚಾರ ನೀಡಿದ ಎಲ್ಲ ಪತ್ರಕರ್ತರ ಸಹಕಾರ ಮತ್ತು ಶ್ರಮಕ್ಕೆ ತಾವು ಅಭಿನಂದನೆ ಸಲ್ಲಿಸುವುದಾಗಿ ಇದೆ ವೇಳೆ ಸಚಿವರು ತಿಳಿಸಿದರು.ಐತಿಹಾಸಿಕ ಹಂಪಿ ಉತ್ಸವಕ್ಕೆ ರಾಜ್ಯ ಸರ್ಕಾರವು ದಿನಾಂಕ ಘೋಷಣೆ ಮಾಡಿದ ದಿನದಿಂದ ಹಂಪಿ ಉತ್ಸವ ಕಾರ್ಯಕ್ರಮ ಪೂರ್ಣವಾಗುವವರೆಗೆ ಉತ್ಸವದ ಪ್ರಚಾರಕ್ಕೆ ಅವಿರತ ಶ್ರಮಿಸಿದ ವಿಜಯನಗರ ಜಿಲ್ಲೆ ಹಾಗೂ ಸುತ್ತಲಿನ ಎಲ್ಲ ಜಿಲ್ಲೆಗಳ ಪರ್ತಕರ್ತರ ಸಹಕಾರವನ್ನು ಸದಾಕಾಲ ಸ್ಮರಿಸುವುದಾಗಿ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಹೇಳಿದರು.

ಈ ಸಂದರ್ಭದಲ್ಲಿ ಶಾಸಕರಾದ ಹೆಚ್.ಆರ್.ಗವಿಯಪ್ಪ, ಎಂ.ಪಿ.ಲತಾ, ಕೆ.ರಾಘವೇಂದ್ರ ಹಿಟ್ನಾಳ ಸೇರಿದಂತೆ ಇನ್ನೀತರ ಮುಖಂಡರು ಇದ್ದರು. ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಪತ್ರಕರ್ತರ ಬಗ್ಗೆ ಪರಿಚಯಿಸಿದರು. ಈ ಸಂದರ್ಭದಲ್ಲಿ ಪತ್ರಕರ್ತರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ವಿವಿಧ ಪತ್ರಿಕೆಗಳ ಮತ್ತು ವಿದ್ಯುನ್ಮಾನ ವಾಹಿನಿಯ ಪ್ರತಿನಿಧಿಗಳು, ಜಿಲ್ಲಾ ವಾರ್ತಾಧಿಕಾರಿಗಳು ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಿಬ್ಬಂದಿ ಇದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಪಾರದರ್ಶಕತೆ ಪ್ರಗತಿಗೆ ರಹದಾರಿ



ಅಬ್ದುಲ್ ಕಲಾಂ ರ ಈ ಮಾತನ್ನು ಒಮ್ಮೆ ಗಮನಿಸಿ "ಒಂದು ದೇಶವು ಭ್ರಷ್ಟಾಚಾರ ಮುಕ್ತವಾಗಬೇಕಾದರೆ ಮತ್ತು ಸುಂದರ ಮನಸ್ಸಿನ ರಾಷ್ಟ್ರವಾಗಬೇಕಾದರೆ, ಮೂರು ಪ್ರಮುಖ ಸಾಮಾಜಿಕ ಸದಸ್ಯರು ಈ ಬದಲಾವಣೆಯನ್ನು ಮಾಡಬಹುದು ಎಂದು ನಾನು ಬಲವಾಗಿ ಭಾವಿಸುತ್ತೇನೆ. ಅವರೇ ನಮ್ಮ ತಂದೆ, ತಾಯಿ ಮತ್ತು ಶಿಕ್ಷಕ" ಭ್ರಷ್ಟಾಚಾರವನ್ನು ಬೇರುಸಹಿತ ಕಿತ್ತೊಗೆಯಲು ಸಮಾಜದ ಸದಸ್ಯರಲ್ಲಿ ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸಲು ಸಾಮೂಹಿಕವಾಗಿ ಕೆಲಸ ಮಾಡಬೇಕಾದ ಪ್ರಮುಖ ಪಾತ್ರಗಳು ಯಾವುವು ಎಂಬುದನ್ನು ಇದು ಸ್ಪಷ್ಟವಾಗಿ ನಮಗೆ ತಿಳಿಸುತ್ತದೆ.

ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯನ್ನು ಸಾಧಿಸಲು ಉತ್ತಮ ಆಡಳಿತದ ಪ್ರಮುಖ ಆಧಾರ ಸ್ತಂಭಗಳಲ್ಲಿ ಈ ಎರಡು ಬಹುಮುಖ್ಯವಾಗುತ್ತವೆ. ಹಾಗೆಯೆ ಸಮಾಜದಲ್ಲಿ ಭ್ರಷ್ಟಾಚಾರದ ಅವಕಾಶಗಳನ್ನು ಕಡಿಮೆ ಮಾಡಲು ಪಾರದರ್ಶಕ ಕಾರ್ಯ ವಿಧಾನಗಳನ್ನು ಸರಳೀಕರಿಸಲು ಈ ಮೇಲೆ ಹೇಳಿದ ಪ್ರಮುಖ ಸಾಮಾಜಿಕ ಸದಸ್ಯರುಗಳಾದ "ತಂದೆ, ತಾಯಿ ಮತ್ತು ಶಿಕ್ಷಕ" ರಿಂದ ಮಾತ್ರ ನಮ್ಮ ನಮ್ಮ ಮನೆ ಮತ್ತು ಶಾಲೆಯಲ್ಲಿ ನಮ್ಮ ನಮ್ಮ ಮಕ್ಕಳಲ್ಲಿ ಅದು ಸಹ ಅವರ ಬಾಲ್ಯದ ಹಂತದಲ್ಲಿಯೇ ಸಾಧಿಸಬಹುದಾಗಿದೆ.

ಹೌದು, ನಮ್ಮ ಇಂದಿನ ಈ ಒತ್ತಡದ ಕೆಲಸದ ಸಂಸ್ಕೃತಿಯಲ್ಲಿ ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯನ್ನು ನಮ್ಮ ಮಕ್ಕಳಲ್ಲಿ ಮೂಡಿಸಬೇಕಾದರೆ ಅವರ ಪಾಲನೆ ಮತ್ತು ಶಾಲಾ ಶಿಕ್ಷಣವು ಅತ್ಯಂತ ಪ್ರಮುಖ ಮತ್ತು ಅದೇ ಅಂತಿಮ ಪಾತ್ರವನ್ನು ವಹಿಸುತ್ತದೆ ಎನ್ನುವುದನ್ನು ಪ್ರತಿಯೊಬ್ಬರೂ ಅರಿಯಬೇಕಾಗಿದೆ.

ಹಾಗಾಗಿ ನಮ್ಮ ಮಕ್ಕಳಲ್ಲಿ ಇಂತಹ ಅನುಭವಗಳನ್ನು ನಾವು ಬಾಲ್ಯದಲ್ಲಿ ಬೆಳಸದೆ ಹೋದರೆ ಮುಂದೆಂದೂ ಇಂತಹ ಗುಣಗಳನ್ನು ಅವರಲ್ಲಿ ಕಾಣಲು ಸಾಧ್ಯವಿಲ್ಲ ಮತ್ತು ಒಂದಿಡೀ ಜನರೇಷನ್ನನ್ನು ನಾವು ತಪ್ಪು ದಾರಿಗೆ ತಳ್ಳಿದಂತಾಗುತ್ತದೆ. ಆದ್ದರಿಂದ ಪ್ರತಿಯೊಬ್ಬ ಮಗುವೂ ಈ ಪ್ರಾಮಾಣಿಕತೆ ಮತ್ತು ಪಾರದರ್ಶಕತೆ ಎನ್ನುವ ಮೌಲ್ಯಗಳನ್ನು ರೂಡಿಸಿಕೊಳ್ಳಬೇಕು ಮತ್ತು ಅದನ್ನು ಅವರ ನಿತ್ಯ ಜೀವನದಲ್ಲಿ ಅನುಭವಿಸಬೇಕು, ಇಲ್ಲದೇ ಹೋದರೆ ಮತ್ತದೇ ಈ ವ್ಯವಸ್ಥೆ ಸರಿಯಾಗಿಲ್ಲ, ಅಧಿಕಾರಿಗಳು ಸರಿಯಿಲ್ಲ, ಕಾನೂನು ಸರಿಯಾಗಿ ಕೆಲಸ ಮಾಡುತ್ತಿಲ್ಲ ಇಟ್ಟಾರೆಯಾಗಿ ಈ ಜನರೇಷನ್ನೇ ಸರಿ ಇಲ್ಲ ಎನ್ನುವ ಹುರುಳಿಲ್ಲದ ಮೊಂಡುವಾದವನ್ನು ಮಂಡಿಸುತ್ತ ಸುತ್ತಬೇಕಾಗುತ್ತದೆ. ಆದರ್ಶಗಳು ಕೇವಲ ಪುಸ್ತಕ ಮತ್ತು ವೇದಿಕೆಯಲ್ಲಿನ ಭಾಷಣಕ್ಕೆ ಮಾತ್ರ ಸೀಮಿತವಾಗುತ್ತವೆ.

ಸಮಾಜದಲ್ಲಿ ಗೌರವಯುತ ನಡೆವಳಿಕೆಗಳನ್ನು ಮತ್ತು ಪ್ರಮಾಣಿಕತೆಯನ್ನು ಮಕ್ಕಳಲ್ಲಿ ಮೂಡಿಸಲು ಪಾಲಕರು ಮಾಡಲೇಬೇಕಾದ ಕೆಲವು ಜವಾಬ್ದಾರಿಗಳು ಎಂದರೆ:

1. ಮಾನವೀಯ ಮೌಲ್ಯಗಳಲ್ಲಿನ ಕೊರತೆಯನ್ನು ನೀಗಿಸುವುದು.
ಪ್ರಸ್ತುತ ನಾವು ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತಿದ್ದೇವೆ, ಒಂದು ಹಂತಕ್ಕೆ ಇದು ಅವಶ್ಯಕವಾಗಿದೆ. ಈ ಮಧ್ಯೆ ನಾವು ಶಿಕ್ಷಣದ ಮೂಲಭೂತ ಅಗತ್ಯಗಳನ್ನು ನಿರ್ಲಕ್ಷಿಸುತ್ತಿದ್ದೇವೆ, ಶಿಕ್ಷಣವು ತಾಂತ್ರಿಕತೆಯೊಂದಿಗೆ ಅಭಿವೃದ್ಧಿಗೆ ಪ್ರೇರಣೆಯನ್ನೂ ನೀಡಬೇಕು ಜೊತೆಗೆ ಮಾನವೀಯ ಮೌಲ್ಯಗಳನ್ನೂ ಕಲಿಸಿಕೊಡಬೇಕಲ್ಲವೆ? ಏಕೆಂದರೆ ಅಂತಿಮವಾಗಿ ನಾವು ಸಮಾಜದಲ್ಲಿ ಬದುಕಬೇಕು ಮತ್ತು ನಮ್ಮ ನಡುವಣ ಇರುವ ಮಾನವ ಸಂಬಂಧಗಳನ್ನು ಉಳಿಸಿಕೊಳ್ಳಬೇಕಲ್ಲವೆ. ನಾವು ನೈತಿಕ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಬೇಕಾಗಿದೆ.

2. ಮಗು ಮನುಷ್ಯನ ತಂದೆ, ಮನುಷ್ಯ ಪ್ರಕೃತಿಯ ಮಗು ಎಂದಾದ ಮೇಲೆ ನಾವು ಸಾಮಾಜಿಕ ವ್ಯವಸ್ಥೆಯ ಭಾಗವಾಗಿದ್ದೇವೆ.
ಒಮ್ಮೆ ನಾವು ಒಂದು ವ್ಯವಸ್ಥೆಯ ಭಾಗವಾದ ಮೇಲೆ ಅದನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗುವುದು ನಮ್ಮ ಜವಬ್ದಾರಿ ಅಲ್ಲವೆ? ಆದರೆ ನಾವು ಇದನ್ನು ಅನುಸರಿಸಲು ವಿಫಲರಾಗುತಿದ್ದೇವೆ ಎಂದು ಅನಿಸುತ್ತಿಲ್ಲವೆ? ಹಾಗಾಗಿ ಪಾಲಕರಾದ ನಾವು ನಮ್ಮ ಮಕ್ಕಳಲ್ಲಿ ಈ ರೀತಿಯ "ಸಮಿಷ್ಠಿ ಹಿತದ ಪ್ರಜ್ಞೆಯನ್ನು" ಸೃಷ್ಟಿಸಬೇಕಾಗಿರುವ ಗುರುತರ ಜವಾಬ್ದಾರಿ ನಮ್ಮ ಮೇಲಿದೆ ಮತ್ತು ಇಂತಹ ಪ್ರಯತ್ನದಿಂದ ನಮ್ಮ ಮಕ್ಕಳು ಅವರ ಜೀವನದಲ್ಲಿ ಈ ಪ್ರಾಮಾಣಿಕತೆ ಮತ್ತು ಗೌವರಯುತ ನಡವಳಿಕೆಗಳ ಫಲವನ್ನು ಅನುಭವಿಸುತ್ತಾರೆ.

3. ಕೌಟುಂಬಿಕ ಸಮಸ್ಯೆಗಳು ಮತ್ತು ಬೇಜವಾಬ್ದಾರಿ ಮನಸ್ಸು ಇಂದಿನ ಅನೇಕ ಕುಟುಂಬಗಳು ಹಾಳಾಗಲು ಕಾರಣವಾಗುತ್ತದೆ.
ಆಧುನಿಕತೆಯಿಂದಾಗಿ ನಮ್ಮ ಕುಟುಂಬಗಳನ್ನು ವಿಭಕ್ತ, ಅವಿಭಕ್ತ ಎಂತಲೋ ಹಳ್ಳೀಯ ಅಥವಾ ನಗರವಾಸಿಗಳಂತಲೋ ಮುಂದುವರಿದು ವಿದೇಶ ವಾಶಿಗಳಂತಲೋ ನಮ್ಮಲ್ಲೆ ವಿಭಜಿಸಿಕೊಂಡು ಪರಸ್ಪರ ಧನಾತ್ಮಕ ಮತ್ತು ಋಣಾತ್ಮಕ ಅಂಶಗಳನ್ನು ಲೆಕ್ಕ ಹಾಕುತ್ತಾ ಕುಳಿತುಕೊಂಡಿದ್ದೇವೆ. ಇದರಿಂದ ಹೇಗೋ ಒಂದು ರೀತಿ ಬದುಕಬಹುದು ಆದರೆ ಅಮೂಲ್ಯವಾದ ಈ ಮಾನವ ಜೀವನವನ್ನು ಜೀವಿಸಬೇಕಲ್ಲವೆ? ಹಾಗೆ ನಮ್ಮ ಮಕ್ಕಳು ತಮ್ಮ ತಮ್ಮ ಜೀವನವನ್ನು ಜೀವಿಸಲು ಕಲಿಸುವುದೂ ಪಾಲಕರ ಪ್ರಮುಖ ಜವಬ್ದಾರಿ, ಇಲ್ಲದೆ ಹೋದರೆ ಮಾನವೀಯ ಸಂಭಂದಗಳು ನೀರಸವಾಗಿ ಕಳಚಿಕೊಳ್ಳುತ್ತವೆ ಹಾಗಾಗದಂತೆ ನೋಡಿಕೊಳ್ಳುವುದೇ ಪಾಲಕರ ಜವಾಬ್ದಾರಿ.



ಜಿ. ಶಿವಕುಮಾರ್ ಸೋಗಿ,
ಕಾರವಾರ, ಕೈಗಾ.
9008130204

4. ಸಮಾಜದಲ್ಲಿ ಗೌರವಯುತ ನಡೆವಳಿಕೆಗಳನ್ನು ಮತ್ತು ಪ್ರಮಾಣಿಕತೆಯನ್ನು ಮಕ್ಕಳಲ್ಲಿ ಮೂಡಿಸಲು ಪಾಲಕರ ಜೊತೆ ಜೊತೆಯಲ್ಲಿ ಶಾಲಾ ಶಿಕ್ಷಣದ ಕೆಲವು ಜವಾಬ್ದಾರಿಗಳು:
ಇಂದಿನ ಮಕ್ಕಳೇ ನಾಳಿನ ನಮ್ಮ ದೇಶದ ಪ್ರಜೆಗಳು ಎಂದು ಹೇಳುವುದರ ಮೂಲಕ ಮಕ್ಕಳ ಕುರಿತಾದ ನಮ್ಮ ಸಂವೇದನಾಶೀಲತೆಯನ್ನು ಕೇವಲ ಮಾತಿನಲ್ಲಿ ತೋರಿಸುತ್ತೇವೆ ಹೊರತು ಅದರ ಅನ್ವಯಿಕ ಸಾಧ್ಯಸಾಧ್ಯತೆಗಳ ಬಗ್ಗೆ ಪ್ರಯತ್ನ ಮಾಡುವುದಿಲ್ಲ. ಕೇವಲ ನಮ್ಮ ಶಾಲೆಗಳಲ್ಲಿ ಯಾಂತ್ರಿಕ, ವೈಜ್ಞಾನಿಕ ಅಂಕಗಳ ಬರ ನೀಗಿಸುವ ವಿಷಯಗಳಲ್ಲದೆ ಭಾರತದ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೂಲಭೂತ ಅಂಶಗಳನ್ನು, ಪ್ರಾಮಾಣಿಕತೆ ಮತ್ತು ಉತ್ತಮ ನಡವಳಿಕೆಗಳ ನೈತಿಕ ಶಿಕ್ಷಣ, ಕಾರ್ಯ ಶಿಕ್ಷಣದಂತಹ ಅಂಶಗಳತ್ತಲೂ ಗಮನ ಹರಿಸಬೇಕು.

5. ಪ್ರಸ್ತುತ ನಮ್ಮ ಶಿಕ್ಷಣ ವ್ಯವಸ್ಥೆ ಮತ್ತು ಅದರ ಪಠ್ಯಕ್ರಮವು ಕೇವಲ ಕೆಲಸ ಆಧಾರಿತ ಮಾನವನನ್ನು ಸಂಪನ್ಮೂಲವನ್ನು ಸೃಷ್ಟಿಸಲು ಸೂಕ್ತವಾಗಿದೆ ಎಂದರೆ ಅತಿಶಯೋಕ್ತಿ ಎನಿಸದು. ಇದು ಬದಲಾಗಬೇಕು ಎಂದರೆ ನಮ್ಮ ಮಕ್ಕಳು ಸ್ವಯಂಪ್ರೇರಿತವಾಗಿ ಪ್ರಾಮಾಣಿಕತೆ ಮತ್ತು ಪ್ರಾಮಾಣಿಕತೆಯ ಚಿಂತನೆಯನ್ನು ಮಾಡಬೇಕು ನಮ್ಮ ಮಕ್ಕಳ ಮನಸ್ಸಿನಲ್ಲಿ ಇಂತಹ ವಿಚಾರಗಳು ಹೊರ ಹೊಮ್ಮಲು ಪೂರಕವಾದ ಪಠ್ಯಕ್ರಮ ಆಧಾರಿತ ಶಿಕ್ಷಣವು ಬೇಕಾಗಿದೆ. ಆ ಶಿಕ್ಷಣ ನಮ್ಮ ಮಗುವಿನ ಮನಸ್ಸು ಮತ್ತು ಹೃದಯವನ್ನು ಅರಳಿಸಬೇಕು, ಮಕ್ಕಳಲ್ಲಿ ಸಮಗ್ರತೆಯನ್ನು ಹೆಚ್ಚಿಸಬೇಕು, ಅಂತಹ ಗುಣಗಳನ್ನು ಬೆಳಸಲು ಸಹಾಕವಾಗಬಲ್ಲ ಕೆಲವು ಚಟುವಟಿಕೆಗಳನ್ನು ಅನುಸರಿಸಬಹುದು

**ಅ. ವಿದ್ಯಾರ್ಥಿ ಸಂಸತ್ತಿನ ರಚನೆ.**
ಬ. ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯನ್ನು ಬಿಂಬಿಸುವ ಕುರಿತು ಕಾರ್ಯಗಾರಗಳನ್ನು ಹಮ್ಮಿಕೊಳ್ಳುವುದು.
**ಕ. ಚರ್ಚೆಗಳು**
ಡ. ರಾಷ್ಟ್ರೀಯತೆ ಕುರಿತ ಹೆಮ್ಮೆಯ ವಿಚಾರಗಳ ಮಂಡನೆ. ರಾಷ್ಟ್ರಗೀತೆ ಹಾಡುವುದು, ರಾಷ್ಟೀಯ ಕ್ರೀಡೆಗಳಲ್ಲಿ ಭಾಗವಹಿಸುವುದು ಮತ್ತು ಕ್ರೀಡಾಕೂಟಗಳನ್ನು ನಡೆಸುವುದು, ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು, ಎನ್ ಎಸ್ ಎಸ್/ ಎನ್ ಸಿ ಸಿ/ಅಗ್ನಿ ವೀರ/ಸೈನ್ಯಕ್ಕೆ ಸೇರಿಕೊಳ್ಳುವುದು, ರಾಷ್ಟ್ರ ರಕ್ಷಣೆಯ, ವಿಚಕ್ಷಣ ದಳದ ಪ್ರತಿಜ್ಞೆ ತೆಗೆದುಕೊಳ್ಳುವ ಮೂಲಕ ನಮ್ಮ ಮಕ್ಕಳಲ್ಲಿ ಹೆಮ್ಮೆಯ ಭಾವನೆಯನ್ನು ಮೂಡಿಸಬಹುದು.

6. ಕೌಶಲ್ಯ ಮತ್ತು ಕಾರ್ಯಕ್ಷಮತೆಗೆ ಪ್ರಾಮುಖ್ಯತೆ ನೀಡುವುದು:
ಕೇವಲ ಕಂಠಪಾಠದ ಶೈಕ್ಷಣಿಕ ವ್ಯವಸ್ಥೆಯನ್ನು ನೆಚ್ಚಿಕೊಳ್ಳದೆ ಮಕ್ಕಳಲ್ಲಿ ಕೌಶಲ್ಯಭರಿತ, ಪ್ರಯೋಗಿಕ, ತರ್ಕಸಹಿತ, ಮೌಲ್ಯಯುಕ್ತ, ಸರಳ ಮತ್ತು ಉನ್ನತ ವಿಚಾರದ ಅಂಶಗಳನ್ನು ಬೆಳಸಬೇಕಾಗಿದೆ. ಅಂತಹ ಕೆಲವು ಚಟುವಟಿಕೆಗಳನ್ನು ನೋಡುವುದಾದರೆ, ಪ್ರಾಯೋಗಿಕ ತರಗತಿಗಳು, ಹೆಚ್ಚು ಹೆಚ್ಚು ಕ್ಷೇತ್ರ ಭೇಟಿಗಳು, ವಿಭಿನ್ನ ಪ್ರಕರಣ ಅಧ್ಯಯನಗಳು, ಹೆಚ್ಚು ಹೆಚ್ಚು ಪ್ರಗತಿಶೀಲ ಸಂಶೋಧನೆಗಳ್ನ್ನು ಕೈಗೊಳ್ಳುವುದು ಇತ್ಯಾದಿ.

ಆದ್ದರಿಂದ, ನಾವು ಮಕ್ಕಳಲ್ಲಿ ಪ್ರಾಮಾಣಿಕತೆ, ಗೌರವಯುತ ನಡೆವಳಿಕೆಗಳನ್ನು ಮತ್ತು ಪಾರದರ್ಶಕತೆಯನ್ನು ಅವರ ಬಾಲ್ಯದಿಂದಲೆ ಅಭಿವೃದ್ಧಿಪಡಿಸುವ ಸಮಯೋಚಿತ ಮತ್ತು ಸಮಗ್ರವಾದ ಪ್ರಯತ್ನದಿಂದ ನಾವೆಲ್ಲರೂ ಅಂದರೆ "ತಂದೆ, ತಾಯಿ ಮತ್ತು ಶಿಕ್ಷಕ" ಒಟ್ಟಾಗಿ ಕೆಲಸ ಮಾಡಿದ್ದೇ ಆದರೆ ಖಂಡಿತವಾಗಿ ನಮ್ಮ ಮಕ್ಕಳಲ್ಲಿ ಉತ್ತಮವಾದ ಗುಣಗಳು ಮತ್ತು ಉತ್ಪಾದಕ ಸಮಾಜವನ್ನು ನೈತಿಕ ನೆಲೆಗಟ್ಟಿನಲ್ಲಿ ಕಟ್ಟಿಕೊಳ್ಳಬಹುದಾಗಿದೆ.

## ಹಂಪಿ ಉತ್ಸವದಲ್ಲಿ ತಾಯಮ್ಮ ಶಕ್ತಿ ಸಂಘದ ಮಹಿಳೆಯರಿಂದ ವಿವಿಧ ವಸ್ತು, ಆಹಾರ ಪದಾರ್ಥಗಳ ಪ್ರದರ್ಶನ

### ಸಂಘದ ನಿರ್ದೇಶಕಿ ಕವಿತಾ ಈಶ್ವರ್‌ಸಿಂಗ್ ಭೇಟಿ, ಮಹಿಳೆಯರಲ್ಲಿ ಹೆಚ್ಚಿದ ಉತ್ಸಾಹ



**ಹಂಪಿ ಟೈಮ್ಸ್ ಹೊಸಪೇಟೆ**
ಹಂಪಿ ಉತ್ಸವದ ವಸ್ತು ಪ್ರದರ್ಶನ ಮಳಿಗೆಯಲ್ಲಿ ನಗರದ ಶ್ರೀ ತಾಯಮ್ಮ ಶಕ್ತಿ ಸಂಸ್ಥೆಯ ಮಹಿಳಾ ಸದಸ್ಯರು 6 ಮಳಿಗೆಗಳಲ್ಲಿ ವಿವಿಧ ಬಗೆಯ ವಸ್ತುಗಳನ್ನು ಪ್ರದರ್ಶಿಸಿದರು. ಮಹಿಳೆಯರು ಮನೆಯಲ್ಲಿ ತಾವೇ ತಯಾರಿಸಿದ ರುಚಿಕರ ಆಹಾರದ ಪದಾರ್ಥಗಳು ಬಟ್ಟೆ ಪ್ರದರ್ಶನ ಮತ್ತು ಮಾರಾಟ ಸೇರಿದಂತೆ ಜನರು ಭೇಟಿ ನೀಡಿ ಮಾಹಿತಿ ಪಡೆದರು. ಜಿಲ್ಲಾಡಳಿತ ವಸ್ತುಪ್ರದರ್ಶನಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದು ಖುಷಿ ತಂದಿದೆ ಎಂದು ಸಂಸ್ಥೆಯ ಮಹಿಳಾ ಸದಸ್ಯರು ತಿಳಿಸಿದರು. ತಾಯಮ್ಮ ಶಕ್ತಿ ಸಂಸ್ಥೆಯ ನಿರ್ದೇಶಕಿ ಕವಿತಾ ಈಶ್ವರಸಿಂಗ್ ಭೇಟಿ ನೀಡಿ ಸ್ವಾಭಿಮಾನಿ ಬದುಕು ಕಟ್ಟಿಕೊಳ್ಳುವ ಮಹಿಳೆಯರಿಗೆ ಪ್ರೋತ್ಸಾಹಿಸಿದರು.

## ಸಾಸಿವೆಕಾಳು ವೇದಿಕೆಯಲ್ಲಿ ಸ್ಥಳೀಯ ಕಲಾವಿದರ ಸಂಗೀತ ರಸ ಮಂಜರಿ



ಹಂಪಿ ಉತ್ಸವ–2024ರ ಎರಡನೇ ದಿನ ಶನಿವಾರ ಸಾಸಿವೆಕಾಳು ಗಣೇಶ ವೇದಿಕೆಯಲ್ಲಿ ಸ್ಥಳೀಯ ಕಲಾ ತಂಡಗಳಿಗೆ ಉತ್ಸವ ಸಮಿತಿ ಅವಕಾಶ ಕಲ್ಪಿಸಿತ್ತು. ಖ್ಯಾತ ಯುವ ಗಾಯಕರಾದ ಅಭಿನಂದನ್ ಆರ್, ವಿಹಾನ್, ಅಚಲ ಮತ್ತು ರಾಘು ಸಂಗೀತ ಸುಧೆ ಹರಿಸಿದರು. ಅಧಿಕಾರಿಗಳು ಪ್ರಮಾಣ ಪತ್ರ ವಿತರಿಸಿದರು.



ಗಾಯತ್ರಿ ಪೀಠ ಮುಖ್ಯ ವೇದಿಕೆಯಲ್ಲಿ ತುಮಕೂರು ಗುಬ್ಬಿ ಶ್ರೀ ವಿವೇಕಾನಂದ ವಿದ್ಯಾಪೀಠದ ಮಕ್ಕಳು ಕಲೆ ಪ್ರದರ್ಶಿಸಿದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 9448633038

ಹಂಪಿ ಟೈಮ್ಸ್
HAMPI TIMES

ಸೋಮವಾರ / Monday 05.02.2024



## ಕವಿ ಮನಸು

### "ಕಾಣೆಯಾಗುತ್ತಾರೆ"

ರಾತ್ರಿಗೆ ಅದೆಷ್ಟು ಕಗ್ಗಂಟುಗಳು
ಆಕಾಶದಲ್ಲಿ, ಭೂಮಿಯಲ್ಲಿ
ಬೆಡ್ರುಮಿನ ಹಾಸಿಗೆಯಲ್ಲಿ
ನಡುಬೀದಿಯಲ್ಲಿ ಸಂಸಾರ ಹೂಡಿದ
ನಾಯಿಗಳಂತೆ ಮಲಗಿರುತ್ತವೆ

ಹೌದು ಜಗವೆಲ್ಲ ಮಲಗಿರುತ್ತದೆ
ಸೂರ್ಯನ ಮಕ್ಕಳೆಲ್ಲ ಮಲಗಿರುತ್ತಾರೆ
ಆದರೆ ಆದರೇ ಚಂದಿರ ರಾತ್ರಿಗೆ ಪಹರೆ
ಕುಂತಿರುತ್ತಾನೆ ನಕ್ಷತ್ರಗಳ ಜೊತೆಗೆ,
ಅಮಾಸಿಯ ರಾತ್ರಿಗೆ ನಕ್ಷತ್ರಗಳೆಲ್ಲ ಹೊಂಚು
ಹಾಕುತ್ತಲೇ ಇರುತ್ತವೆ

ನದಿ ತಣ್ಣನೆ ಹರಿಯುತ್ತಿರುತ್ತದೆ
ಗಾಳಿ ತಂಪಾಗಿ ಬೀಸುತ್ತಿರುತ್ತದೆ
ರೈಲು ನಿಶಬ್ಧದ ಹೊಟ್ಟೆ ತೂರಿ ತಾಳ
ಹಾಕುತ್ತಾ ಚಲಿಸುತ್ತದೆ
ಇವಷ್ಟೇ ಅಲ್ಲ ಅದೆಷ್ಟೋ ಕನಸುಗಳು
ರಾತ್ರಿಗೆ ನನಸಾಗುತ್ತವೆ ಮತ್ತು
ಸತ್ತುಹೋಗುತ್ತವೆ

ದಂದೆಗಳ ಲಿಸ್ಟಿಗೆ ಹೊಸದೊಂದು
ಸೇರ್ಪಡೆ
ದುಡಿದು ದಣಿದು ಗೇಣುದ್ದ ಜಾಗದಲ್ಲಿ
ಬೆಚ್ಚಗೆ ಮಲಗಿದ್ದ ಬೆವರ ಮಕ್ಕಳು
ಕಾಣೆಯಾಗಿ ಬಿಡುತ್ತಾರೆ

ಹೌದು ಕಾಣೆಯಾಗುತ್ತಾರೆ
ಮುಂಜಾನೆಗೆ ಬೆವರೆಲ್ಲ ರಕ್ತವಾಗಿ
ಹರಿಯುತ್ತದೆ
ಸ್ವಲ್ಪ ಹೊತ್ತಿಗೆ ಹೆಪ್ಪುಗಟ್ಟಿ ದನ ತಿನ್ನುವವರ,
ಅಜಾ ಕೂಗುವವರ ಚಹರೆ ಪಡುತ್ತದೆ
ಸಂಜೆಗೆ ನೆತ್ತರು, ಮಾಂಸ ಕೊಳೆತು
ಉರೋಟು ನಾತ

ನೆತ್ತರ ವಾಸನೆ ಮೂಗ ಹೊಕ್ಕು
ದೇಶದ್ರೋಹಿಗಳ ಚಹರೆ ಪಡೆಯುತ್ತದೆ
ಕೊಂದವರ ಹೆಸರು ದೇಶ ಭಕ್ತರ
ಪಟ್ಟಿಯಲ್ಲಿ ...

ಗೆಳೆಯ
ಒಂದು ದಿನ ದೇಶದ್ರೋಹಿಗಳ ಪಾಳಿ
ಮುಗಿದುಹೋಗುತ್ತದೆ
ಮರುದಿನದ ದಾಹಕ್ಕೆ ದೇಶಭಕ್ತರದ್ದೆ
ನೆತ್ತರು,
ಹಸಿವಿಗೆ ಮತ ಹೊತ್ತ ಮೈಗಳೆ ಬೇಕು

~ ವಿಶಾಲ್ ಮ್ಯಾಸರ್

### ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

### ತುಂಗಭದ್ರಾ ನೀರಿನ ಮಟ್ಟ



| ಭಾನುವಾರ: 04-02-2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.21 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 266 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 9.601 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1615.19 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8990 ಕ್ಯುಸೆಕ್ |
| ಸಾಮರ್ಥ್ಯ | 48.868 ಟಿಎಂಸಿ |

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

ದೇಶ ವಿದೇಶಿಗರ ದೃಷ್ಟಿಯಲ್ಲಿ ಹಂಪಿ ವೈಭವ । ಮುಂದಿನ ಜನ್ಮವಿದ್ದರೆ ನಾನೂ ಭಾರತೀಯಳಾಗುವೆ । ಹಲ್ಗೇರಿಯಾ ಪ್ರವಾಸಿ ನೂಸಾ ಮನದಾಳದ ಮಾತು

# ಭಾರತೀಯ ಸಂಸ್ಕೃತಿಗೆ ಮನಸೋತ ವಿದೇಶಿಗರು

**ಹಂಪಿ ಟೈಮ್ಸ್ ಹೊಸಪೇಟೆ**
ದೇಶ ವಿದೇಶಿಗರು ಹಂಪಿ ಮತ್ತು ಉತ್ಸವ ಕುರಿತಂತೆ ವಿಶೇಷ ಅನುಭವಗಳನ್ನು ಹಂಪಿ ಟೈಮ್ಸ್ ಜತೆ ಹಂಚಿಕೊಂಡಿದ್ದು, ಉತ್ಸವವನ್ನು ತಮ್ಮದೇ ಆದ ಬಗೆಯಲ್ಲಿ ಶಬ್ದರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ. ಹಂಪಿ ಉತ್ಸವವನ್ನು ಸಾಕ್ಷೀಕರಿಸುವಂತೆ ಕೆಲ ಹೊರ ರಾಜ್ಯದ ವರ್ತಕರು ಜನರ ಕೊರತೆಯನ್ನು ಬಿಚ್ಚಿಟ್ಟರೆ, ಕೆಲವರು ಬರದ ಛಾಯೆಯ ಪರಿಣಾಮ ತೆರೆದಿಟ್ಟರು. ವಿದೇಶಿಗರು ಹಂಪಿಯ ಸ್ಮಾರಕಗಳ ಬಗ್ಗೆ ಮೂಕವಿಸ್ಮಿತರಾರುವ ಜತೆಗೆ ಉತ್ಸವದಲ್ಲಿನಲ್ಲಿನ ನೃತ್ಯ, ಗಾಯನ, ವಾದನ ಸೇರಿ ನಾನಾ ಸಾಂಸ್ಕೃತಿಕ ಕಾರ್ಯಕ್ರಮಗಳ ಸವಿರುಚಿ ಸವಿದ ಬಗ್ಗೆ ವಿವರಿಸಿದರು.




ಹಂಪಿ ಶಿಲ್ಪಕಲೆ ಮತ್ತು ಸಮೃದ್ಧ ಪರಿಸರವನ್ನು ನೋಡುತ್ತಿದ್ದರೆ ಅದ್ಭುತ ಅನುಭವ ನೀಡುತ್ತದೆ. ದೇಶದ ಕಲೆ, ಪರಂಪರೆ ಭವ್ಯವಾಗಿದೆ. ಭರತನಾಟ್ಯ, ಪೋಕ್ ಡ್ಯಾನ್ಸ, ಸಿಂಗಿಂಗ್ ಎಲ್ಲವೂ ವಿಭಿನ್ನವಾಗಿವೆ. ಹಂಪಿಯ ಕಲಾವೈಭವವನ್ನು ನೋಡುತ್ತಿದ್ದರೆ ಮುಂದಿನ ಜನ್ಮದಲ್ಲಿ ನಾನೂ ಭಾರತೀಯಳಾಗಬೇಕು ಎನಿಸಿದೆ.

– ನೂಸಾ. ಹಲ್ಗೇರಿಯಾ ಪ್ರವಾಸಿ



ಹಂಪಿ ಮತ್ತು ಕೊಪ್ಪಳವನ್ನು ಸೇರಿಸುವ ಬ್ರಿಡ್ಜ್ ನಿರ್ಮಾಣವಾಗಬೇಕಿದೆ. ಇದರಿಂದಾಗಿ ಮತ್ತಷ್ಟು ಹೊರ'ಜಿಲ್ಲೆಗಳ ಜನರನ್ನು ಉತ್ಸವದತ್ತ ಸೆಳೆಯಬಹುದು. ಉತ್ಸವದಿಂದಾಗಿ ದೇಶದ ಸಾಂಸ್ಕೃತಿಕ ಸೊಬಗನ್ನು ವಿದೇಶಿಗರಿಗೂ ಉಣಬಡಿಸಬಹುದಾಗಿದೆ.

– ಅಕ್ಕಿ ತೋಟೇಶ್.
ಜಿ.ಪಂ.ಮಾಜಿ ಸದಸ್ಯ ಹಗರಿಬೊಮ್ಮನಹಳ್ಳಿ



ಹಂಪಿ ಉತ್ಸವ ಎಲ್ಲ ಮಗ್ಗುಲುಗಳಿಂದಲೂ ಮೋಹಕವಾಗಿದೆ. ನಮ್ಮ ಫ್ರಾನ್ಸ್‌ನ 12 ಗೆಳೆಯರು ಹಂಪಿಯ ಸಮಗ್ರ ವೀಕ್ಷಣೆ ನಡೆಸಿದ್ದೇವೆ. ನಿಜಕ್ಕೂ ಉತ್ಸವ ಅಚ್ಚುಕಟ್ಟಾಗಿದೆ.

– ಜಾರ್ನೋ. ಫ್ರಾನ್ಸ್ ಪ್ರವಾಸಿ.



ಪ್ರಾಕೃತಿಕವಾಗಿ ಹಂಪಿಯ ಗುಡ್ಡಗಳ ಮೇಲಿನಿಂದ ಸನ್‌ಸೆಟ್(ಸೂರ್ಯಾಸ್ತಮಾನ) ನೋಡುವುದೇ ಒಂದು ಹಬ್ಬ. ಉತ್ಸವದ ಕಾರ್ಯಕ್ರಮಗಳಲ್ಲಿ ಮ್ಯೂಸಿಕ್ ಬಹಳಾ ಇಷ್ಟವಾಯಿತು.

– ರಾಬಿನ್ ಇಂಗ್ಲೆಂಡ್ ಪ್ರವಾಸಿ.



ಹಂಪಿ ಉತ್ಸವದಲ್ಲಿ ಭಾಗವಹಿಸಲು ಖುಷಿಯಾಗ್ತಿದೆ. ನಮ್ಮ ಫ್ರೇಂಡ್ಸ್ ಎಲ್ಲಾ ಪ್ರೋಗ್ರಾಂ ನೋಡಿದೆವು. ಎಲ್ಲವೂ ವಿಭಿನ್ನವಾಗಿವೆ. ಉತ್ಸವಗಳಿಂದ ಇತಿಹಾಸ ತಿಳಿಯಲು ಸಾಧ್ಯವಾಗುತ್ತದೆ. ನಮ್ಮ ಹೆಮ್ಮೆಯ ಹಂಪಿ ಉತ್ಸವವನ್ನ ಅರ್ಥಪೂರ್ಣವಾಗಿ ಆಚರಿಸುವಂತಾಗಲಿ

– ಮಾನಸ, ವರ್ಣ
ಆರತಿ. ಹೊಸಪೇಟೆ.



ಎಲ್ಲ ವೇದಿಕೆಗಳಲ್ಲಿ ಭಾರತ ಕಲರ್‌ಪುಲ್ ಆಗಿ ಕಾಣ್ತಿದೆ. ಹಬ್ಬದ ವಾತಾವರಣ, ಉತ್ಸಾಹ ಹಂಪಿಯ ಎಲ್ಲೆಡೆಯೂ ಕಾಣುತ್ತಿದೆ. ಉತ್ಸವ ವೀಕ್ಷಿಸಲು ಬಂದವರ ಮುಖದಲ್ಲಿ ಉತ್ಸಾಹ ಕಂಡೆ. ಭಾರತೀಯ ಕಲೆ, ಸಂಸ್ಕೃತಿ ನೋಡುವ ಭಾಗ್ಯ ನನಗೆ ದೊರೆತಿದೆ.

– ವೆವ್ರೊ. ರಷಿಯಾ.



ಯಾಕೋ ಮೊದಲ ದಿನ ಜನ ಕಮ್ಮಿ ಬರ್ತಿದ್ದಾರೆ ಅನಿಸುತ್ತೆ. ಬಸ್ ಏನೋ ಬಿಟ್ಟಾರೆ ಆದರೆ, ಜನರ ಕೈಯಾಗ ರೊಕ್ಕ ಇಲ್ಲ. ಶಕ್ತಿ ಯೋಜನೆಯಿಂದ ಹೆಣ್ಣುಮಕ್ಕಳೇ ಸಾಕಷ್ಟು ಬರ್ತಿದಾರೆ.

– ಚೌಡಮ್ಮ ಹಂಪಿ.
ತೆಂಗಿನಕಾಯಿ ಹೂ.ವ್ಯಾಪಾರಿ.



ಫಸ್ಟ್ ಟೈಮ್ ಬಂದೀದಿನಿ ಸಾರ್. ಏನೋ ಬಾಳ ಹೇಳಿದ್ರು, ವ್ಯಾಪಾರ ಆಗಬಹುದು ಅಂತ ಬಂದೆ. ಆದರೆ, ವ್ಯಾಪಾರವೇ ಇಲ್ಲ.

– ಫಾರುಕ್ ಬೆಂಗಳೂರು.
ಹೆಣ್ಣುಮಕ್ಕಳ ಉಡುಗೆ ವ್ಯಾಪಾರಿ. ಬೆಂಗಳೂರು.



ಈ ಬಾರಿ ಹಂಪಿ ಉತ್ಸವದಲ್ಲಿ ಸಾಕಷ್ಟು ಕಲಾವಿದರಿಗೆ ಅವಕಾಶ ನೀಡಿದ್ದಾರೆ. ಒಂದಕ್ಕಿಂತ ಒಂದು ಕಾರ್ಯಕ್ರಮ ವಿಶೇಷವಾಗಿವೆ.

– ಗುರುಬಸವರಾಜ, ಮೌನೇಶ, ವೀರೇಶ.
ಹೂವಿನಹಡಗಲಿ.



ಹಂಪಿ ಉತ್ಸವದಲ್ಲಿ ಎಂ.ಪಿ.ಪ್ರಕಾಶ್ ನೆನಪಾಗುತ್ತಾರೆ. ವೇದಿಕೆಗಳು ಕಡಿಮೆ ಇವೆ. ಇನ್ನಷ್ಟು ವಿಭಿನ್ನ ಕಾರ್ಯಕ್ರಮಗಳನ್ನು ಆಯೋಜಿಸಬಹುದಾಗಿತ್ತು.

– ಬಸವನಗೌಡ ಬೆಣ್ಣಿಕಲ್ಲು.
ಹಗರಿಬೊಮ್ಮನಹಳ್ಳಿ



ಉತ್ಸವ ನಡೆಸುವ ಉಸ್ತುವಾರಿಗೆ ಈ ನೆಲದ ಸಂಸ್ಕೃತಿಯ ಪರಿಚಯವಿಲ್ಲ. ಅಧಿಕಾರಿಗಳ ಹಿಡಿತದಲ್ಲಿ ಜನೋತ್ಸವವಾಗದೆ ಕೇವಲ ಆಡಳಿತೋತ್ಸವವಾಗಿದೆ. ಎಂ.ಪಿ.ಪ್ರಕಾಶ್ ಬಗೆಯಲ್ಲಿ ಕನಿಷ್ಠ ಚಿಂತನೆಯೂ ಸಚಿವ ಮತ್ತು ಜಿಲ್ಲಾಡಳಿತಕ್ಕಿಲ್ಲ.

– ವಿ.ಬಿ.ಮಲ್ಲಪ್ಪ. ಬಳ್ಳಾರಿ.



ಜಿಲ್ಲಾಡಳಿತ ಆಯೋಜಿಸಿರುವ ಹಂಪಿಯನ್ನು ಬೈ ಸ್ಕೈಯಿಂದ ನೋಡಲು ಟಿಕೇಟ್ ಖರೀದಿಸಿದ್ದೇವೆ. ಟಿಕೇಟ್ ಪಡೆದು ಎರಡು ಗಂಟೆಯಾದರೂ ಅವಕಾಶ ಕಲ್ಪಿಸುತ್ತಿಲ್ಲ. ನಮ್ಮೂರಿಗೆ ಮರಳಲು ಫ್ಲೈಟ್ ಬುಕ್ಕಿಂಗ್ ಮಾಡಿದ್ದು, ಅದನ್ನು ತಪ್ಪಿಸಿಕೊಳ್ಳುವ ಆತಂಕ ಎದುರಾಗಿದೆ. ಸಮಯದ ಮೌಲ್ಯ ಇಲ್ಲಿನವರಿಗೆ ತಿಳಿಯದಂತಿದೆ.

– ಸಜ್ಜನ್ ಚಕ್ರವರ್ತಿ, ಕಲ್ಕತ್ತ

## ಕವಿಗಳ ಗೌರವಧನಕ್ಕೂ ಬರ!



ಹಂಪಿ ಉತ್ಸವ 2024 ರಲ್ಲಿ ಸಮಾನ ಅವಕಾಶ ಸಿಗಲು ಮುಖ್ಯ,ಮಹಿಳಾ ಹಾಗೂ ಯುವ ಎನ್ನುವ ಹೆಸರಿನಲ್ಲಿ ಪ್ರತ್ಯೇಕವಾಗಿ ಮೂರು ಕವಿಗೋಷ್ಠಿ ಹಾಗೂ ಎರೆಡು ವಿಚಾರ ಗೋಷ್ಠಿಗಳನ್ನು ಹಮ್ಮಿಕೊಂಡಿದ್ದರು.
ಮುಖ್ಯ ಕವಿಗೋಷ್ಠಿ ಮತ್ತು ವಿಚಾರ ಗೋಷ್ಠಿಗಳಲ್ಲಿ ಯಾವ ಮಹಿಳೆಯರು ಇರಲಿಲ್ಲ,
ಅದರಂತೆಯೇ ಮಹಿಳಾ ಕವಿಗೋಷ್ಠಿಯಲ್ಲಿ ಯಾವ ಪುರುಷರು ಇರಲಿಲ್ಲ. ಸಮಾನ ಅವಕಾಶಗಳು ಎಂದರೆ ಎಲ್ಲ ಜನರ ಸಮಾನ ಭಾಗವಹಿಸುವಿಕೆಯೆ ಹೊರತು ಪ್ರತ್ಯೇಕಿಸುವಿಕೆ ಅಲ್ಲ. ಭಾಗವಹಿಸಿದ ಕವಿಗಳಿಗೆ ಬರೀ ಪ್ರಮಾಣ ಪತ್ರವಷ್ಟೆ ಕೊಟ್ಟಿದ್ದಾರೆ. ಯಾವುದಾದರೂ ಹಂಪಿಯ ಭಾವಚಿತ್ರವೋ ಅಥವಾ ಒಳ್ಳೆಯ ಪುಸ್ತಕಗಳನ್ನ ನೆನಪಿನ ಕಾಣಿಕೆಯಾಗಿಕೊಟ್ಟಿದ್ದರೆ ಚೆನ್ನಾಗಿತ್ತು. ಹಾಗೆಯೇ ಗೌರವ ಧನದ ಯಾವ ಭರವಸೆಯೂ ಕವಿಗಳಿಗೆ ನೀಡದಿರುವುದು ಬೇಸರ ತಂದಿದೆ. ಕನಿಷ್ಠ ಕವಿಗಳನ್ನು ವೇದಿಕೆಯ ಮೇಲೆ ಕೂರಿಸಿದೆ. ಇದ್ದದ್ದು, 14 ಕೋಟಿ ರೂಪಾಯಿ ವೆಚ್ಚದ ಯೋಜನೆಯ ಉತ್ಸವದಲ್ಲಿ ಕವಿಗಳನ್ನು ಅಗೌರವಿಸಿದ್ದು ನಾಚಿಕೆಗೇಡಿನ ಸಂಗತಿ.

– ವಿಶಾಲ್ ಮ್ಯಾಸರ್, ಸಾಹಿತಿ, ಹೊಸಪೇಟೆ

## ರಂಗಭಾರತಿಗೆ ಅವಕಾಶ ಕಲ್ಪಿಸದ ಹಂಪಿ ಉತ್ಸವ



ಹಡಗಲಿಯ ರಂಗಭಾರತಿಯು ಕರ್ನಾಟಕದ ಪ್ರತಿಷ್ಠಿತ ರಂಗಕಲಾತಂಡ. ಕಳೆದ 50 ವರ್ಷಗಳಿಂದ ರಂಗಭೂಮಿಯನ್ನು ಕಟ್ಟಿ ಬೆಳೆಸಿಕೊಂಡು ಬರುತ್ತಿದೆ.
ಉತ್ತರ ಕರ್ನಾಟಕದಲ್ಲಿ ರಂಗರೆಪರ್ಟರಿಯನ್ನ ಹೊಂದಿರುವ ಏಕೈಕ ರಂಗ ಸಂಸ್ಥೆ. ಹಡಗಲಿಯಿಂದ ಮುಂಬೈ ದೆಹಲಿವರೆಗೂ ತನ್ನ ನಾಟಕಗಳನ್ನು ಪ್ರದರ್ಶಿಸಿದೆ. ಸಾಂಸ್ಕೃತಿಕ ರಾಜಕಾರಣಿ ಮಾಜಿ ಉಪಮುಖ್ಯಮಂತ್ರಿ ಎಂಪಿ ಪ್ರಕಾಶ್ ಅವರ ಕನಸಿನ ರಂಗಸಂಸ್ಥೆ. ನಾಡಿನಲ್ಲೆ ಹೆಮ್ಮೆ ಪಡುವಂತೆ ರಂಗಸಂಸ್ಥೆ. ಅವಿಭಜಿತ ಬಳ್ಳಾರಿ ಜಿಲ್ಲೆಯ ಹಾಗೂ ಈಗಿನ ವಿಜಯನಗರ ಜಿಲ್ಲೆಯ ಹೆಮ್ಮೆಯ ರಂಗ ಅಸ್ಮಿತೆ ರಂಗಭಾರತಿ. ಇಂಥಹ ರಂಗ ತಂಡಕ್ಕೆ ಹಂಪಿ ಉತ್ಸವದಲ್ಲಿ ವೇದಿಕೆಯಲ್ಲಿ(ಅರ್ಜಿ ಸಲ್ಲಿಸಿದ್ದರು) ಕಾರ್ಯಕ್ರಮ ನಡೆಸಲು ಅವಕಾಶ ಕೊಡದೆ ನಿರ್ಲಕ್ಷ್ಯಮಾಡಲಾಗಿರುವುದು ಆಯ್ಕೆ ಸಮಿತಿ ಹಾಗೂ ಜಿಲ್ಲಾಡಳಿತಕ್ಕೆ ಸಾಂಸ್ಕೃತಿಕ ಮಾಹಿತಿಯ ಕೊರತೆ ಎಂಬುದು ಎದ್ದುಕಾಣುತ್ತಿದೆ.
ಎಂ.ಪಿ.ಪ್ರಕಾಶ್ ರನ್ನು ಹಂಪಿ ಉತ್ಸವದಲ್ಲಿ ಅವರನ್ನು ಸ್ಮರಿಸದೆ ಇರುವುದು ರಾಜಕೀಯದ ದುರುದ್ದೇಶ ಎನ್ನಬಹುದು. ಆದರೆ ಅವರು ರಂಗಭಾರತಿಗೆ ವೇದಿಕೆಯಲ್ಲಿ ಕಾರ್ಯಕ್ರಮ ನೀಡದಿರುವುದು ಸಂಘಟಕರ ಸಾಂಸ್ಕೃತಿಕ ದಿವಾಳಿತನವನ್ನೂ ತೋರಿಸುತ್ತಿದೆ. ತನ್ನ ಜಿಲ್ಲೆಯ ಪ್ರತಿಷ್ಠಿತ ರಂಗಭೂಮಿ ಸಂಸ್ಥೆ ಬಗ್ಗೆ ಜಿಲ್ಲಾಡಳಿತ ಗುರುತಿಸಿದೆ ಇರುವುದು ವಿಷಾದನೀಯ.

– ಎಂ.ಎಂ.ಶಿವಪ್ರಕಾಶ, ಹೊಸಪೇಟೆ.

# ಯುವಕವಿಗಳ ಕವಿತೆಗಳು ಸಮಾಜಮುಖಿಯಾಗಿ ಮೂಡಿಬರಲಿ

**ಹಂಪಿ ಟೈಮ್ಸ್ ಹೊಸಪೇಟೆ**
ವರ್ತಮಾನದ ಘಟನೆಗಳು ಕವಿತೆಯಲ್ಲಿ ಅಡಗಿರಲಿ. ಯುವಕವಿಗಳ ಕವಿತೆಗಳು ಸಮಾಜಮುಖಿಯಾಗಿ ಮೂಡಿಬರಲಿ ಎಂದು ಚಿಂತಕರು, ಬಂಡಾಯ ಸಾಹಿತಿ ಅಬ್ದುಲ್ ಹೆ ತೋರಣಗಲ್ಲು ಅಭಿಪ್ರಾಯ ಪಟ್ಟರು.

ಹಂಪಿ ಉತ್ಸವ ಅಂಗವಾಗಿ ವಿರುಪಾಕ್ಷೇಶ್ವರ ವೇದಿಕೆಯಲ್ಲಿ ಭಾನುವಾರ ಜರುಗಿದ ಮಕ್ಕಳ ಹಾಗೂ ಯುವ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕವಿಗಳ ಶಕ್ತಿ ಅಪಾರವಾಗಿದೆ. ಪ್ರಾನ್ಸ್, ಜರ್ಮನ್ ಸೇರಿದಂತೆ ಹಲವು ದೇಶಗಳನ್ನು ಕವಿಗಳು ಕಟ್ಟಿಬೆಳೆಸಿದ್ದಾರೆ. ಕವಿಗಳು ರಾಷ್ಟ್ರ ನಿರ್ಮಾಣ ಮಾಡಿದ್ದಾರೆ ಎಂದರು. ಕವಿ ಹಾಗೂ ಸಾಹಿತಿಗಳ ರಾಷ್ಟ್ರೀಯ ವಿಚಾರಧಾರೆಗಳು ಹಾಗೂ ಸಮಾನತೆ, ಗುರಿಗಳ ಬಗ್ಗೆ ಅಪರಿಮಿತ ಜ್ಞಾನ ರಾಷ್ಟ್ರ ಮುನ್ನಡೆಸಲು ಸಹಕಾರಿ ಆಗಿರುತ್ತದೆ ಎಂದರು.



ಸಮಾಜದ ಅಂಕು ಡೊಂಕುಗಳನ್ನು ತಿದ್ದುವ ಕಾರ್ಯ, ಸಮಾಜ ಘಾತುಕ ಶಕ್ತಿಗಳ ಶಮನ ಕುರಿತ ವಿಚಾರಧಾರೆಗಳು ಕವಿತೆಗಳಲ್ಲಿ ಅಡಗಿರಲಿ. ಸಮಾಜದ ಪ್ರತಿಯೊಬ್ಬರ ತನು-ಮನ ಬೆಸೆಯುವ ಕೆಲಸ ಮಾಡಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕನ್ನಡ ನಮ್ಮ ತಾಯಿಭಾಷೆ, ಕನ್ನಡ ಸಾಹಿತ್ಯದಲ್ಲಿ ಶಬ್ದ ಬಂಡಾರಕ್ಕೇನು ಕಡಿಮೆ ಇಲ್ಲ. ಕವಿ ಸಾಹಿತಿಗಳು ಹೊಸ ಶಬ್ದಗಳನ್ನು ಹೆಕ್ಕಿ ತೆಗೆದು ಅವುಗಳನ್ನು ಕವಿತೆಗಳಲ್ಲಿ ಅರ್ಥಪೂರ್ಣವಾಗಿ ಬಳಕೆ ಮಾಡುವ ಮನಸ್ಸು ಹೊಂದಬೇಕಿದೆ ಎಂದು ಚಿಂತಕ ಅಬ್ದುಲ್ ಹೆ ತೋರಣಗಲ್ಲು ಸಲಹೆ ನೀಡಿದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಮಾತನಾಡಿ, ಈ ವರ್ಷ ಹೊಸದಾಸಗಿ ಮಕ್ಕಳ ಹಾಗೂ ಯುವಕವಿ ಗೋಷ್ಠಿ ನಡೆಸಲಾಗುತ್ತಿದೆ. ಈ ಮೂಲಕ ಹಂಪಿ ಉತ್ಸವ ಅರ್ಥಪೂರ್ಣ ಮಾಡಲಾಗಿದೆ. ಯುವ ಕವಿಗಳ ಸಾಹಿತ್ಯಾಭಿರುಚಿ ಈ ವೇದಿಕೆ ಮೂಲಕ ಅನಾವರಣಗೊಳ್ಳಲಿ. ಕವಿತ್ವ ಆಸಕ್ತಿಯ ಮನಸ್ಸುಗಳ ದೇಹಕ್ಕೆ ಅಷ್ಟೆ ಸುಸ್ತಾಗಬಹುದು, ಮನಸ್ಸಿಗೆ ಹೆಚ್ಚು ಮುದ ಹಾಗೂ ಅಭಿರುಚಿ ಮೂಡಿಸಲಿವೆ ಎಂದರು.

ಧಣಿದ ಧ್ವನಿ ಶೀರ್ಷಿಕೆ ಯಿಂದ ಮೂಡಿ ಬಂದ ವಿಜಯ ರಾಘವೇಂದ್ರ ಬಿ.ಎಂ ಅವರ ಕವಿತೆ, ದಲಿತರ ಸ್ಥಿತಿ ಗತಿಯನ್ನು ಹಾಗೂ ಬದಲಾವಣೆ ಏಳ್ಗೆಯನ್ನು ಬಿಂಬಿಸುವ ಪ್ರಯತ್ನ ಮಾಡಿತು. ಅಲ್ಲದೇ ದುಡಿಯುವವರ ಪರಿಸ್ಥಿತಿ, ಸಮಾಜದಲ್ಲಿನ ಸಾಮರಸ್ಯ ಸಹಿಷ್ಣುತೆ ಕುರಿತು ಬೆಳಕು ಚಲ್ಲಿತು.

ಬಸಂತ್ ಡಿ.ಯು ಅವರು ಸ್ಮಶಾನ ಮೌನ ಶೀರ್ಷಿಕೆ ಯಡಿ, ಸಮಾಜದಲ್ಲಿನ ಮೇಲು ಕೀಳು, ಜಾತಿ ತಾರತಮ್ಯ, ಸಮುದಾಯಗಳ ನಡುವಿನ ವೈಮನಸ್ಸು ಸೇರಿ ಇತರ ವಿಷಯಗಳ ಬಗ್ಗೆ ಗಮನ ಹರಿಸಿ, ಔಚಿತ್ಯಪೂರ್ಣ ವಾಚನ ಮಾಡಿದರು.

ವಿಶಾಲ ಮ್ಯಾಸರ್ ಅವರು ಕಾಣೆಯಾಗುತ್ತಾರೆ ಶೀರ್ಷಿಕೆ ಅಡಿಯಲ್ಲಿ ರಾತ್ರಿಗೆ ಎಷ್ಟು ಕಗ್ಗಂಟುಗಾಳು, ಜಗವೇಲ್ಲ ಮಲಗಿರುತ್ತದೆ. ಆದರೆ ಚಂದ್ರ ಪಹರೆ ಕಾಯುತ್ತಾನೆ ನಕ್ಷತ್ರಗಳೊಂದಿಗೆ ಎಂದು ಕವನ ವಾಚಿಸಿ, ದುರ್ಬಲರ ಬದುಕು ಪರಿಚಯಿಸಿದರು.

ಆರ್.ಮನೋಹರ, ಬಿ.ಎಸ್.ಶರಣ, ಕ್ಯಾದಿಗಿಹಾಳ ಉದೇದಪ್ಪ, ಎಚ್.ಎಂ. ಜಂಬುನಾಥ, ನಾಗರಾಜ ಬಡಿಗೇರ, ನಾಗರಾಜ ಗಂಟಿ, ಎಂ.ವಿರೇಂದ್ರ, ಪ್ರಜ್ವಲ, ಜಿ.ಯರಿಸ್ವಾಮಿ, ಬಿ.ವಿ.ಸ್ನೇಹಾ, ಕುಸುಮಾ ಗುಂಡಗೇರಿ, ಕೀರ್ತಿ ಗಂಗಾವತಿ, ಸಾನಿಯಾ ಹೆಚ್., ವೀರೇಶಮ್ಮ ಅವರುಗಳು ಕವಿತೆಗಳನ್ನು ವಾಚನ ಮಾಡಿದರು. ಕವಿಗೋಷ್ಠಿಯಲ್ಲಿ ಡಿಡಿಪಿಯು ಪಾಲಕ್ಷ.ಟಿ, ಪ್ರಾಚಾರ್ಯ ನಾಗರಾಜ ಹವಾಲ್ದಾರ ಸೇರಿದಂತೆ ಇತರರು ಇದ್ದರು. ಇದೇ ವೇಳೆ ಕವಿತೆ ವಾಚನ ಮಾಡಿದವರಿಗೆ ಪ್ರಮಾಣ ಪತ್ರಗಳನ್ನು ವಿತರಣೆ ಮಾಡಿದರು. ಉಪನ್ಯಾಸಕಿ ನಾಗರತ್ನಾ ನಿರ್ವಹಿಸಿದರು.

ಹಂಪಿ ಟೈಮ್ಸ್ HAMPI TIMES

# ಹಂಪಿ ಉತ್ಸವದ ಸಾಂಸ್ಕೃತಿಕ ಕಲಾ ವೈಭವ

■ **ಹಂಪಿ ಉತ್ಸವ ಹೊಸಪೇಟೆ**

ಐತಿಹಾಸಿಕ ಹಂಪಿ ಉತ್ಸವದ ಮೂರನೇ ದಿನ ಭಾನುವಾರ ಇಳಿ ಸಂಜೆ ಹೊತ್ತಿನಲ್ಲಿ ಜಾನಪದ ವಾಹಿನಿ ಮೆರವಣಿಗೆಯು ಅದ್ಧೂರಿಯಾಗಿ ನಡೆಯಿತು.

ಹಂಪಿಯ ಶ್ರೀ ಉದ್ದಾನ ವೀರಭದ್ರೇಶ್ವರ ದೇವಸ್ಥಾನದ ಬಳಿ ಮೆರವಣಿಗೆಗೆ ಶಾಸಕ ಹೆಚ್.ಆರ್. ಗವಿಯಪ್ಪ ಅವರು ಭುವನೇಶ್ವರಿ ದೇವಿಗೆ ಪುಷ್ಪಾರ್ಪಿಸಿ, ನಗಾರಿ ಬಾರಿಸುವ ಮೂಲಕ ಚಾಲನೆ ನೀಡಿದರು.

ಮುಂದೆ ರಾಜಗಾಂಭೀರ್ಯದಿಂದ ಲಕ್ಷ್ಮೀ ಆನೆಯು ಹೆಜ್ಜೆ ಹಾಕುತ್ತಿದ್ದರೆ ಹಿಂದೆ ಭುವನೇಶ್ವರಿ ದೇವಿ ಇದ್ದ ರಥ ಸಾಗಿತು. ಕಣ್ಣು ಹಾಯಿಸಿದ ಕಡೆಯೆಲ್ಲಾ ಸಾರ್ವಜನಿಕರು ತಮ್ಮ ಮೊಬೈಲ್ ಮೂಲಕ ಫೋಟೋ ಮತ್ತು ವಿಡಿಯೋ ದೃಶ್ಯೀಕರಣ ಮಾಡುವುದು ಕಂಡುಬಂತು. ಮೆರವಣಿಗೆ ನಡೆಯುವ ರಾಜಬೀದಿಯುದ್ದಕ್ಕೂ ಎಲ್ಲೆಲ್ಲೂ ಮೇಳೈಸಿದ ಕಲಾ ತಂಡಗಳ ವೈಭವ ಮತ್ತು ಕಲಾತಂಡಗಳ ಸಾಂಪ್ರದಾಯಿಕ ವಾದ್ಯಗಳ ನಾದವೂ ಮಾರ್ಗದುದ್ದಕ್ಕೂ ಪ್ರತಿಧ್ವನಿಸಿತು.

ಕಣ್ಣಿಗೆ ಹಬ್ಬ ನೀಡುತ್ತಿರುವ ವೇಷ ಭೂಷಣ ತೊಟ್ಟ ಕಲಾ ತಂಡಗಳ ನೃತ್ಯ. ನೃತ್ಯವನ್ನು ನೋಡುತ್ತಾ ಸಂಭ್ರಮಿಸುತ್ತಿರುವ ಕಲಾ ಪ್ರೇಮಿಗಳು. ಮೆರವಣಿಗೆಯು ಉತ್ಸವಕ್ಕೆ ಆಗಮಿಸಿದ್ದ ಜನತೆಯ ಆಕರ್ಷಣೆಗೆ ಕಾರಣವಾಯಿತು. ವಿದೇಶಿ ಪ್ರವಾಸಿಗರು ಸಹ ಜಾನಪದ ಕಲೆಗಳಿಗೆ ಮನಸೋತು ಫೋಟೋ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು.

ಜಾನಪದ ವಾಹಿನಿಯಲ್ಲಿ ಡೊಳ್ಳು ಕುಣಿತ, ನಾದಸ್ವರ, ಕಹಳೆ ವಾದ್ಯ, ಸಮಾಳ, ನಂದಿಧ್ವಜ, ಮಂಗಳವಾದ್ಯ, ಜೆಂಡೆವಾದ್ಯ, ಸಿಂಗಾರಿ ಮೇಳ, ಕಂಸಾಳೆ, ಸುಡಗಾಡು ಕೈಚಳಕ ಚಮತ್ಕಾರ, ಸಂಸ್ಕೃತಿ ಜನಪದ ಕಲೆ, ಚಿಲಿಪಿಲಿಬೊಂಬೆ, ಹಲಗೆ ವಾದನ, ತಮಟೆ ವಾದನ, ಸೋಮನ ಕುಣಿತ, ಸಮಾಳ ಮತ್ತು ನಂದಿಕೋಲು, ಗಾರುಡಿ ಗೊಂಬೆ, ಕೋಲಾಟ, ನಗಾರಿ, ಹಂಪಾ ಪಟ್ಟಣ ಸುಡಗಾಡು, ಕೈಚಳಕ ಚಮತ್ಕಾರ, ಸಂಸ್ಕೃತಿ ಜಾನಪದ ಕಲೆ, ಮೋಹಿನಿ ಭಸ್ಮಾಸುರ ರೂಪಕ, ಹಗಲು ವೇಷ, ಕೀಲು ಕುದುರೆ, ಪೂಜಾ ಕುಣಿತ, ನಂದಿಧ್ವಜ ಮತ್ತು ಸಂಬಾಳ, ಹಲಗೆ ವಾದನ, ವೀರಗಾಸೆ, ಗೊಂಬೆಕುಣಿತ, ಚಿಲಿಪಿಲಿ ಗೊಂಬೆ, ವೀರಗಾಸೆ ಕಲಾ ಪ್ರಕಾರಗಳು ಮೆರವಣಿಗೆಗೆ ಮೆರುಗು ನೀಡಿದವು.

ಹಂಪಿಯ ಉದ್ದಾನ ವೀರಭದ್ರೇಶ್ವರ ದೇವಸ್ಥಾನದಿಂದ ಆರಂಭವಾದ ಜಾನಪದ ವಾಹಿನಿ ಮೆರವಣಿಗೆಯು ಹಂಪಿಯ ಬಜಾರ್ ಮೂಲಕ ವಿರೂಪಾಕ್ಷೇಶ್ವರ ದೇವಸ್ಥಾನದವರೆಗೆ ವೈಭವದಿಂದ ಜರುಗಿತು.

ಈ ಸಂದರ್ಭದಲ್ಲಿ ಶಾಸಕಿ ಲತಾ ಮಲ್ಲಿಕಾರ್ಜುನ, ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ್ ರಂಗಣ್ಣನವರ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.





























ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.




**ಹುದುಗಿಸಿಟ್ಟ ಬಾಂಬ್ ಹುಡುಕಿದ ಲೂಸಿ । ಕದ್ದವಸ್ತು ಕಂಡುಹಿಡಿದ ಸಿಂಬಾ । ಶ್ವಾನಗಳ ಶಿಸ್ತು, ನಿಷ್ಠೆ । ಮಾಲೀಕನ ಆದೇಶಕ್ಕೆ ಶಿರಬಾಗಿದ ಶುನಕಗಳು**

# ಶುನಕಗಳ ಜಾಣ್ಮೆಗೆ ಬೆರಗಾದ ಜಾಣರು

■ **ಹಂಪಿ ಟೈಮ್ಸ್ ಹೊಸಪೇಟೆ**

ಹುದುಗಿಸಿಟ್ಟ ಬಾಂಬ್ ಹುಡುಕಿದ ಲೂಸಿ, ಅಪರಾಧಿ ಪತ್ತೆ ಹಚ್ಚಿದ ಬ್ರೂನೋ, ಕದ್ದವಸ್ತು ಕಂಡುಹಿಡಿದ ಸಿಂಬಾ, ಹೀಗೆ ವಿಜಯನಗರ ಜಿಲ್ಲಾ ಪೊಲೀಸ್ ಶ್ವಾನದಳದ ಕರ್ತವ್ಯದ ಕರಾಮತ್ತು ಕಣ್ತುಂಬಿ ಕೊಂಡ ಜನರು, ಶುನಕಗಳ ಜಾಣ್ಮೆಗೆ ಮಾರು ಹೋದರು.

ಕಮಲಾಪುರದ ಹವಾಮಾ ಕಚೇರಿ ಹಿಂಭಾಗದ ಆವರಣದಲ್ಲಿ. ಹಂಪಿ ಉತ್ಸವ–2024ದ ಕಡೆಯ ದಿನ ಭಾನುವಾರ ಆಯೋಜಿಸಲಾದ ಶ್ವಾನ ಪ್ರದರ್ಶನ ಜನರ ಮೆಚ್ಚುಗೆಗೆ ಪಾತ್ರವಾಯಿತು. ಹಂಪಿ ಉತ್ಸವದ ಶ್ವಾನ ಪ್ರದರ್ಶನದಲ್ಲಿ ಪೊಲೀಸ್ ಶ್ವಾನಗಳು ಭಾಗವಹಿಸಿದ್ದವು. ಒಂದೂವರೆ ವರ್ಷದ ಬ್ರೂನೋ ಡಾಬರ್‌ಮನ್ ಜಾತಿ ಸೇರಿದ ನಾಯಿ. ಸುಮಾರು 19 ಅಪರಾಧ ಪ್ರಕರಣಗಳಲ್ಲಿ ಬ್ರೂನೋ ಅಪರಾಧಿಗಳನ್ನು ಪತ್ತೆ ಹಚ್ಚುವಲ್ಲಿ ಪ್ರಮುಖ ಪಾತ್ರವಹಿಸಿದ್ದಾನೆ. ಲಾಬ್ರಡಾರ್ ಜಾತಿ ಸೇರಿದ ಎರಡು ವರ್ಷದ ಲೂಸಿ, ಬಾಂಬ್ ಪತ್ತೆ ಹಚ್ಚುವಲ್ಲಿ ನಿಷ್ಣಾಂತಳು. ಇನ್ನೂ ಇದೇ ಜಾತಿಗೆ ಸೇರಿದ ಸಿಂಬಾ ಒಂದೂವರೆ ವರ್ಷದವನಾಗಿದ್ದು, ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚುವಲ್ಲಿ ಪೊಲೀಸರ ಕಾರ್ಯದಲ್ಲಿ ನೆರವಾಗುತ್ತಾನೆ. ತರಬೇತುದಾರ ಆಜ್ಞೆ ಅನುಸರಿಸಿ ನಡೆಯುವ ಈ ಶ್ವಾನಗಳು ನಿಂತಲ್ಲೇ ನಿಲ್ಲುವುದು, ಕೂರುವುದು, ಹೊರಳುವುದು, ಸಂಜ್ಞೆ ಆಧರಿಸಿ ಬೊಗಳುವುದು, ಗೌರವ ವಂದನೆ ಸಲ್ಲಿಸುವುದು ನೋಡಿದ ಜನ ಬೆರಗಾದರು.

ಈ ಬಾರಿಯ ಉತ್ಸವದಲ್ಲಿ 19 ವಿವಿಧ ಜಾತಿಯ ದೇಶಿ ಹಾಗೂ ವಿದೇಶಿ ತಳಿಗಳ 66ಕ್ಕೂ ಹೆಚ್ಚು ಶ್ವಾನಗಳು ತಮ್ಮ ಮಾಲೀಕರೊಂದಿಗೆ ಸ್ಪರ್ಧೆಯಲ್ಲಿ ಭಾಗವಹಿಸಿದ್ದವು.

ಅತಿ ಎತ್ತರ, ದೊಡ್ಡ ಹಾಗೂ ನೀಳ ಕಾಯದ ಗ್ರೇಟ್ ಡೇನ್, ಚಿಕ್ಕದಾದ ಸಿಟ್ಜ್ ಹಾಗೂ ಪಮೋರಿಯನ್, ಬೇಟೆಗೆ ಹೆಸರಾದ ಮುಧೋಳ, ಕುಟುಂಬಕ್ಕೆ ಪ್ರಿಯವಾದ ಗೋಲ್ಡನ್ ರಿಟ್ರೈವರ್, ಅರ್ಧ ಅಡಿ ಎತ್ತರವಿದ್ದು, ಉದ್ದನೇ ದೇಹದೊಂದಿ ಬಿಲದಲ್ಲಿ ಅವಿತಿರುವ ಇಲಿ, ಮೊಲ ಸೇರಿದಂತೆ ಮುಂತಾದ ಚಿಕ್ಕಪುಟ್ಟ ಪ್ರಾಣಿಗಳ ಭೇಟೆಗೆ ಹೆಸರುವಾಸಿಯಾದ ಡ್ಯಾಶ್ ಹೌಂಡ್, ಶೀತ ವಲಯದಲ್ಲಿ ಮಾನವ ಅತ್ಯಂತ ಉಪಯುಕ್ತ ಸಂಗಾತಿ ಎನಿಸಿದ ಸೈಬಿರಿಯನ್ ಹಸ್ಕಿ, ಯುದ್ಧಕ್ಕೆ ಹೆಸರುವಾಸಿಯಾದ ಜರ್ಮನ್ ಶೆಫರ್ಡ್, ಮಾಲಿಕನಿಗೆ ಅತ್ಯಂತ ನಿಷ್ಠೆಯಿಂದಿರುವ ಡಾಬರ್ ಮನ್, ಭಾರತದಲ್ಲಿ ಜನಪ್ರಿಯ ಹೊಂದಿರುವ ಲ್ಯಾಬ್ರಡಾರ್, ವಿರಳ ಜಾತಿಯ ವಿದೇಶಿ ತಳಿಯ ಸೇಂಟ್ ಬರ್ನರ್ಡ್, ಪಾಕಿಸ್ತಾನದ ಬುಲ್ಲಿ, ಬೀಗಲ್, ಕಾಕಸ್ ಫನಲ್, ಕೇನ್ ಕೋರ್ಸ್ ಸೇರಿದಂತೆ ಹಲವು ಶ್ವಾನಗಳು ಸ್ಪರ್ಧೆಯ ವಿಶೇಷ ಎನಿಸಿದವು. ತಳಿಗಳವಾರು ಮೊದಲು ಸ್ಪರ್ಧೆ ನಡೆಸಿ ಶ್ವಾನಗಳನ್ನು ಆಯ್ಕೆ ಮಾಡಲಾಯಿತು. ತಳಿವಾರು ಪ್ರಥಮ ಸ್ಥಾನ ಪಡೆದ ಶ್ವಾನಗಳನ್ನು ಕೊನೆ ಹಂತ ಸ್ಪರ್ಧೆಗೆ ಆಯ್ಕೆ ಮಾಡಲಾಯಿತು. ಸ್ಪರ್ಧೆ ಅತ್ಯಂತ ತುರುಸಿನಿಂದ ಕೂಡಿತ್ತು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಶ್ವಾನ ಪ್ರದರ್ಶನಕ್ಕೆ ಚಾಲನೆ ನೀಡಿದರು. ಬೆಂಗಳೂರು ಪಶು ವೈದ್ಯಕೀಯ ಕಾಲೇಜಿನ ಪ್ರೊಫೆಸರ್ ಡಾ.ಬಸವಾರಾಜ್ ಬಾಳಣ್ಣನವರ್, ಶಿವಮೊಗ್ಗ ಪಾಲಿ ಕ್ಲೀನಿಕ್‌ನ ಡಾ.ಬಸವರಾಜ ಹೂಗಾರ್, ಹಿರಿಯ ಪಶುವೈದ್ಯಾಧಿಕಾರಿ ಡಾ.ಶ್ರೀಪಾದ್ ರಾವ್ ಶ್ವಾನ ಪ್ರದರ್ಶನ ಸ್ಪರ್ಧೆಯ ನಿರ್ಣಾಯಕರಾಗಿ ಕಾರ್ಯ ನಿರ್ವಹಿಸಿದರು. ಮೂಲ ಜಾತಿ ತಳಿ, ದೇಹದಾರ್ಢ್ಯತೆ, ಚುರುಕುತನ ಮಾಲಿಕರೊಂದಿಗೆ ಅವಿನಾಭ ಸಂಬಂಧದ ಆಧಾರದ ಮೇಲೆ ವಿಜೇತ ಶ್ವಾನಗಳನ್ನು ಆಯ್ಕೆ ಮಾಡಲಾಯಿತು. ಪಶುಸಂಗೋಪನೆ ಹಾಗೂ ಪಶು ವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕ ಡಾ.ಪಾಮ್‌ಸಿಂಗ್, ಸಹಾಯಕ ನಿರ್ದೇಶಕ ಡಾ.ಬೆಣ್ಣಿ ಬಸವರಾಜ, ಪಶು ವೈದ್ಯಾಧಿಕಾರಿಗಳಾದ ಡಾ. ಮಲ್ಲಿಕಾರ್ಜುನ್, ಡಾ.ಯುಗೇಂದ್ರ ಮಾನ್ವಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



## ಗ್ರೇಟ್ ಡೇನ್ ತಳಿಗೆ ಚಾಂಪಿಯನ್ ಪಟ್ಟ

**ಹಂಪಿ ಉತ್ಸವ–2024ದ ಶ್ವಾನ ಪ್ರದರ್ಶನದಲ್ಲಿ ಹೊಸಪೇಟೆ ನಗರದ ವೀರು ಅವರ ಗ್ರೇಟ್ ಡೇನ್ ತಳಿಗೆ ಸೇರಿದ ಶ್ವಾನ ಚಾಂಪಿಯನ್ ಆಫ್ ಚಾಂಪಿಯನ್ ಪಟ್ಟ ಅಲಂಕರಿಸಿತು. ಪ್ರಥಮ ಸ್ಥಾನ ಪಡೆದ ಈ ಶ್ವಾನ ರೂ.10,000 ನಗದು ಪುರಸ್ಕಾರವನ್ನು ಪಡೆದಿದೆ. ಮರಿಯಮ್ಮನಹಳ್ಳಿಯ ಸತೀಶ್ ಚಿದ್ರಿಯವರ ಡಾಬರ್ ಮನ್ ದ್ವಿತಿಯ ಸ್ಥಾನ ಪಡೆಯುವುದರೊಂದಿಗೆ ರೂ.7,500 ನಗದು ಬಹುಮಾನಕ್ಕೆ ಪಾತ್ರವಾಯಿತು. ಇನ್ನೂ ಮರಿಯಮ್ಮನಹಳ್ಳಿಯ ಬಸವರಾಜ್ ಅವರ ಮುದೋಳ ಹೌಂಡ್ ತೃತೀಯ ಸ್ಥಾನ ಪಡೆದು ರೂ.5000 ನಗದು ತನ್ನದಾಗಿಸಿಕೊಂಡಿತು. ಶ್ರೇಯಸ್ ಅವರ ಟಾಯ್ ಪಾಪ್, ಶಿವಪ್ರಸಾದ್ ಅವರ ಸೈಬೀರಿಯನ್ ಹಸ್ಕಿ, ಕಾರ್ತಿಕ್ ಅವರ ಬೀಗಲ್, ಲಕ್ಷ್ಮೀ ನಾರಾಯಣ ಅವರ ಸಿಡ್ಜು ತೀರ್ಪುಗಾರರ ಮೆಚ್ಚುಗೆ ಪಡೆದು, ಪ್ರಶಂಸೆಗೆ ಪಾತ್ರವಾದವು.**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA